PlanetRead

Literacy for a Billion

Movie: Sankranthi
Year: 1989

Song: Dudida Jeevada Baalu
Lyricist: Nagathihalli Chandrashekar

ದುಡಿದ ಜೀವದ ಬಾಳು
ಸಿಡಿದ ನೋವಿನ ಗೂಡು
ಎದೆಯೊಳಗೆ ಪದಮಿಡಿದು
ಚೀರಾಟವೋ ಚೀರಾಟವೋ
ದುಡಿದ ಜೀವದ ಬಾಳು
ಸಿಡಿದ ನೋವಿನ ಗೂಡು
ಎದೆಯೊಳಗೆ ಪದಮಿಡಿದು
ಚೀರಾಟವೋ ಚೀರಾಟವೋ

ದೂರ ದಾರಿಯಲಿ ಕಂಡ ದಿಕ್ಕರದ ಜೀವಕೇ
ಹೆಣ್ಣೊಡಲು ಜೀವ ಸೆಲೆಯಾಯಿತೋ
ಪ್ರೀತಿ ಬಯಸುವ ಜೀವಾ
ಪ್ರೀತಿ ಬಯಸುವ ಜೀವಾ
ಆಗಲಿ ಕುಂತವೆ ಹಿಂಗೇ
ಋೂಳ ಜನರನು ನಂಬಿ ಹಾಳಾದರು
ದುಡಿದ ಜೀವದ ಬಾಳು
ಸಿಡಿದ ನೋವಿನ ಗೂಡು
ಎದೆಯೊಳಗೆ ಪದಮಿಡಿದು
ಚೀರಾಟವೋ
ಚೀರಾಟವೋ

ಊರ ದನಗಳ ಕಾದು ಧೀರನಾಗಲು ಹೋಗಿ
ಗರಿ ಸುಟ್ಟ ರೆಕ್ಕೆಯಲಿ ಉರಿಗಾಯವೋ
ಫಲಕೊಡುವ ಕಾಲದಲೀ
ಫಲಕೊಡುವ ಕಾಲದಲೀ
ಏಸೊಂದು ಗಿಳಿಗಳು ಇದ್ದವೋ
ಬರಿದಾದ ಗಳಿಗೆಯಲೀ
ಕೊಡಲಿಯಾದೋ
ದುಡಿದ ಜೀವದ ಬಾಳು
ಸಿಡಿದ ನೋವಿನ ಗೂಡು
ಎದೆಯೊಳಗೆ ಪದಮಿಡಿದು
ಚೀರಾಟವೋ
ಚೀರಾಟವೋ

*Disclaimer: PlanetRead does not own these lyrics and is not using them for any commercial purpose. For over 20 years, PlanetRead has been subtitling Bollywood songs for mass literacy. These lyrics are being offered as part of PlanetRead's literacy development initiative.*

*PlanetRead is a tax-exempt, not-for-profit: 501(c) (3) in the United States and 80(G) in India.*